(ಇಂದು ದಿನಾಂಕಃ 06-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು: ಶ್ರೀ ವಿ.ಆರ್.ಎಮ್. ವಕೀಲರಿಂದಃ**

ದಿನಾಂಕ 07-03-2024 ರಂದು ರಾತ್ರಿ 8 ಗಂಟೆಗೆ ಅಪಘಾತವಾಗಿರುತ್ತದೆ. ಕಬ್ಬು ಕಟಾವು ಮಾಡಿ ಲೋಡು ಮಾಡಿ ಬರುವಾಗ ಅಪಘಾತವಾಗಿರುತ್ತದೆ. ನಾವು ದ್ವಿಚಕ್ರ ವಾಹನದಲ್ಲಿ ನಾನು ಮತ್ತು ಪ್ರದೀಪ ಬರುವಾಗ ಅಪಘಾತವಾಗಿರುತ್ತದೆ. ಎದುರಿನಿಂದ ಬಂದ ಸರಕು ಸಾಗಿಸುವ ವಾಹನದ ತಪ್ಪಿನಿಂದ ಅಪಘಾತವಾಗಿರುತ್ತದೆ. ಅದರ ನಂಬರ ಕೆ.ಎ 28 ಡಿ-5030 ಇರುತ್ತದೆ. ದೂರನ್ನು ಪ್ರದೀಪ ನೀಡಿರುತ್ತಾನೆ. ದಿನಾಂಕ 26-03-2024 ರಂದು ದೂರನ್ನು ಪ್ರದೀಪ ನೀಡಿರುತ್ತಾನೆ. 19 ದಿನ ತಡವಾಗಿ ಪ್ರದೀಪ ನೀಡಿರುತ್ತಾನೆ ಎಂದರೆ ಸರಿ. ಅಪಘಾತವಾದ ತಕ್ಷಣ ನನ್ನನ್ನು ಚಿಟಗುಪ್ಪ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಆಗ ನನ್ನ ಜೊತೆ ನನ್ನ ಮನೆಯವರು, ಪ್ರದೀಪ ಇದ್ದರು.

ನಾನು ಶಾಲೆ ಕಲಿತಿರುವುದಿಲ್ಲ. ಆಸ್ಪತ್ರೆಗೆ ನನ್ನನ್ನು ಚಿಕಿತ್ಸೆಗೆ ಕರೆದುಕೊಂಡು ಹೋದಾಗ ಗಾಯಗಳು ಹೇಗೆ ಆಗಿರುತ್ತವೆ ಎಂದು ನನ್ನನ್ನು ಕೇಳಿರುತ್ತಾರೆ ಎಂದರೆ ನಾನು ಅರೆ ಪ್ರಜ್ಞಾ ವ್ಯವಸ್ಥೆಯಲ್ಲಿ ಇದ್ದೆನು. ನಿ.ಪಿ-12 ರ ಪ್ರಕಾರ MLC ವರದಿಯನ್ನು ರಟಕಲ ಪೋಲೀಸ ಠಾಣೆಗೆ ಕಳಿಸಿದ್ದು ಸರಿಯಿದೆ ಎಂದರೆ ಸರಿ. ನಿ.ಪಿ- 12 ರಲ್ಲಿ ದಿನಾಂಕ 07-03-2024 ರಂದು ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಬಂದಿರುತ್ತಾರೆ ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ಅದೇ ರೀತಿ ನಿ.ಪಿ-12 ರಲ್ಲಿ History of Injury assault ಅಂತಾ ನಮೂದಿಸಿದೆ ಎಂದರೆ ಸರಿ. ನಮಗೆ ಆದ ಗಾಯಗಳು ಯಾರೋ ಹೊಡೆದಿದ್ದರಿಂದ ಆಗಿರುತ್ತದೆ ಎಂದು ನಿ.ಪಿ-12 ರಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿ.

ಅಜಯ ತಂದೆ ಗೋವಿಂದ ರಾಠೋಡ ರವರು ಅಪಘಾತ ಆದ ವಿಷಯವನ್ನು ತಿಳಿಸಿದವರು ಆಗಿರುತ್ತಾರೆ. ಅವರು ಪೋಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ನಮಗೆ ಗಾಯ ಪಡಿಸಿದ ವಾಹನ ಮತ್ತು ನಾವು ಚಲಾಯಿಸುತ್ತಿದ್ದ ವಾಹನ ಅಪಘಾತವಾದ ಸ್ಥಳದಲ್ಲಿ ಇದ್ದ ಬಗ್ಗೆ ಹೇಳಿಕೆಯನ್ನು ನೀಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅವರು ಅಪಘಾತದಿಂದ ಗಾಯಗೊಂಡು ಇಬ್ಬರು ವಯಸ್ಕರರು ರೋಡಿನ

ಬಿದ್ದಿದರು ಎಂದು ಹೇಳಿಕೆಯನ್ನು ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಹೆಚ್ಚಿನ ಚಿಕಿತ್ಸೆಗಾಗಿ ಗುಲ್ಬರ್ಗಾದ ಜಿಮ್ಸ್ ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿ 2 ದಿನ ಒಳ ರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಆ ಬಗ್ಗೆ ದಾಖಲಾತಿಯನ್ನು ಸಲ್ಲಿಸಿರುತ್ತೇನೆ. ಸಲ್ಲಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಹೆಚ್ಚಿ ನ ಚಿಕಿತ್ಸೆಗಾಗಿ ಹೈದರಾಬಾದಿನ ಅರ್ಚನಾ ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿ ನಾನು ಅರೆಪ್ರಜ್ಞೆಯಿಂದ ಬಳಲುತ್ತಿದ್ದೆ. ನನ್ನನ್ನು ನನ್ನ ಮನೆಯವರು ಕರೆದುಕೊಂಡು ಹೋಗಿರುತ್ತಾರೆ. ನಾನು ಅರ್ಚನಾ ಆಸ್ಪತ್ರೆ ಹೈದರಾಬಾದನಲ್ಲಿ ದಿನಾಂಕ 09-03-2024 ರಂದು ದಾಖಲಾಗಿದ್ದೆ ಎಂದರೆ ಸರಿ. ದಿನಾಂಕ 07-03-2024 ರಿಂದ 09-03-2024 ರ ಮಧ್ಯದಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲ ಎಂದರೆ ಸರಿ. ಅರ್ಚನಾ ಆಸ್ಪತ್ರೆ ಹೈದರಾಬಾದನಲ್ಲಿ ಚಿಕಿತ್ಸೆಗೆ ಹೋದಾಗ ನಮ್ಮ ಮನೆಯವರು ಹೇಳಿದ ಆಧಾರದ ಮೇಲೆ ಗಾಯಗಳು ಆದ ಕಾರಣವನ್ನು ನಿ.ಪಿ-18 ರಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿ. ನಿ.ಪಿ- 18 ರಲ್ಲಿ ಗಾಯಗಳು ದ್ವಿಚಕ್ರ ವಾಹನ ಸ್ಲಿಪ್ ಆಗಿ ಬಿದ್ದಿದರಿಂದ ಗಾಯಗಳಾಗಿರುತ್ತವೆ ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ಅದರಲ್ಲಿ ಅಪಘಾತದ ದಿನಾಂಕ ಮತ್ತು ಸ್ಥಳ ನಮೂದಿಸಿರುತ್ತಾರೆ ಎಂದರೆ ಸರಿ. ಆದರೆ ಅಪಘಾತವು ಆಟೋದಿಂದ ಆಗಿರುತ್ತದೆ.

ದಿನಾಂಕ 26-03-2024 ಕ್ಕಿಂತ ಮುಂಚೆ ಯಾವುದೇ ದಾಖಲಾತಿಯಲ್ಲಿ ನಮಗೆ ಟಂ ಟಂ ಆಟೋದಿಂದ ಗಾಯಗಳು ಆಗಿರುತ್ತವೆ ಎಂದು ಎಲ್ಲಿಯಾ ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅರ್ಚನಾ ಆಸ್ಪತ್ರೆ ಹೈದರಾಬಾದನಲ್ಲಿ 18-03-2024 ರವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೆನೆ. ನಾನು ದಿನಾಂಕ 18-03-2024 ರಂದು ಡಿಸ್ಚಾರ್ಜ ಆಗಿರುತ್ತೇನೆ ಎಂದರೆ ಸರಿ. ನಂತರ ಬೇರೆ ಆಸ್ಪತ್ರೆಯಲ್ಲಿ ಹೆಚ್ಚಿ ನ ಚಿಕಿತ್ಸೆ ಪಡೆದಿರುವುದಿಲ್ಲ. ಚಿಕಿತ್ಸೆಗಾಗಿ 7 ಲಕ್ಷ ಖರ್ಚು ಮಾಡಿರುತ್ತೇನೆ ಎಂದು ಮತ್ತು ಮುಂದುವರಿದ ಚಿಕಿತ್ಸೆಗಾಗಿ 5 ಲಕ್ಷ ಹಣ ಬೇಕೆಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

ನಾನು ಕುರಿ ಕಾಯುವ ಉದ್ಯೋಗ ಮಾಡುತ್ತೇನೆ. ನಾನು ಕುರಿ ಕಾಯುವ ಕಾಯಕದಿಂದ ತಿಂಗಳಿಗೆ 30 ಸಾವಿರ ರೂ. ಆದಾಯ ಗಳಿಸುತ್ತಿಲ್ಲ ಎಂದರೆ ಸರಿಯಲ್ಲ.

ನನಗೆ ಈಗ ವಯಸ್ಸು 33 ವರ್ಷ. ಅಪಘಾತವಾದಾಗ 31 ವರ್ಷವಾಗಿತ್ತು. ಕೆ.ಎ 28 ಡಿ-5030 ನಿಂದ ನನಗೆ ಯಾವುದೇ ಅಪಘಾತ ವಾಗಿಲ್ಲ ಎಂದರೆ ಸರಿಯಲ್ಲ. 19 ದಿನ ತಡಮಾಡಿ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಮಗೆ ಬೇರೆ ವ್ಯಕ್ತಿಗಳ ಹಲ್ಲೆಯಿಂದ ಗಾಯವಾಗಿರುತ್ತದೆ ಎಂದು MLC ಯಲ್ಲಿ ನಮೂದಿಸಿದ್ದರೂ ಅಪಘಾತದಿಂದ ಗಾಯ ವಾಗಿರುತ್ತವೆ ಎಂದು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ, ಅದಕ್ಕೆ ಯಾವುದೇ ಪೂರಕ ದಾಖಲೆ ಸಲ್ಲಿಸದೆ ಸುಳ್ಳು ಪರಿಹಾರ ಕೋರಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.